ಗ್ರಂಥಾಲಯ ಇಲಾಖೆಯಡಿಯಲ್ಲಿ ಖಾಲಿ ಇರುವ ಹುದ್ದೆಗಳು.

810(1195) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಂಥಾಲಯ ಇಲಾಖೆಯಡಿಯಲ್ಲಿ ಖಾಲಿ ಇರುವ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು? ಅವುಗಳು ಯಾವುವು, ಅವುಗಳ ನೇಮಕಾತಿಗಳನ್ನು ಯಾವಾಗ ಮಾಡಲಾಗುವುದು?

ಆ) ತಾತ್ಕಾಲಿಕ ಮೇಲ್ವಿಚಾರಕರಾಗಿ ಕೆಲಸ ಮಾಡುವವರ ಬಗ್ಗೆ ನೇಮಕಾತಿ ಸಂದರ್ಭದಲ್ಲಿ ಆದ್ಯತೆ ಕೊಡುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :—

ಅ) ಒಟ್ಟು 80

ಆ) 1) ಮುಖ್ಯ ಗ್ರಂಥಾಲಯಾಧಿಕಾರಿಗಳು - 5

2) ಗ್ರಂಥಪಾಲಕರು - 5

3) ಗ್ರಂಥಾಲಯ ಸಹಾಯಕರು - 36

4) ಬೆರಳಚ್ಚುಗಾರರು - 05

5) ಗ್ರಂಥಾಲಯ ಸಹವರ್ತಿಗಳು - 29

ನೇಮಕಾತಿ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಸಮುದಾಯ ಶೌಚಾಲಯಗಳ ನಿರ್ಮಾಣ.

812(1196) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಹಳ್ಳಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು)

ಅ) ನಿರ್ಮಲ ಗ್ರಾಮ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾದ ಹಳ್ಳಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು)

ಆ) ಇನ್ನುಳಿದ ಹಳ್ಳಿಗಳಿಗೆ ಸಮುದಾಯ ಶೌಚಾಲಯಗಳನ್ನು ನಿರ್ಮಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :—

ಅ) 56,682 (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) ನಿರ್ಮಲ ಗ್ರಾಮ ಯೋಜನೆಯಡಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿಲ್ಲ.

ಇ) ಸಮುದಾಯ ಶೌಚಾಲಯಗಳ ನಿರ್ವಹಣೆಯಲ್ಲಿ ತೊಂದರೆಗಳಿರುವ ಕಾರಣ ನಿರ್ಮಲ ಗ್ರಾಮ ಯೋಜನೆಯಡಿ ವೈಯಕ್ತಿಕ ಕೌಟುಂಬಿಕ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. (ಒಂದು ವೇಳೆ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಸಮುದಾಯ ಶೌಚಾಲಯಗಳ ನಿರ್ವಹಣೆ ವಹಿಸಿಕೊಳ್ಳಲು ಮುಂದೆ ಬಂದಲ್ಲಿ, ಈ ಕುರಿತಂತೆ ಪರಿಶೀಲಿಸಲಾಗುವುದು).

ಅನುಬಂಧ-1

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ಕಂದಾಯ ಗ್ರಾಮಗಳ ಸಂಖ್ಯೆ	ಇತರ ಜನವಸತಿಗಳ ಸಂಖ್ಯೆ	ಒಟ್ಟು ಜನವಸತಿಗಳ ಸಂಖ್ಯೆ
1.	ಬೆಂಗಳೂರು (ನ)	681	604	1285
2.	ಬೆಂಗಳೂರು (ಗ್ರಾ)	1713	1681	3394
3.	ಬೆಳಗಾಂ	1138	368	1506
4.	ಬಳ್ಳಾರಿ	591	640	1231
5.	ಬೀದರ್	587	218	805
6.	ಬಿಜಾಪುರ	1247	331	1578
7.	ಚಿಕ್ಕಮಗಳೂರು	1021	2332	3353
8.	ಚಿತ್ರದುರ್ಗ	1289	724	2013
9.	ದಕ್ಷಿಣ ಕನ್ನಡ	615	6230	6845
10.	ಧಾರವಾಡ	1344	108	1452

11	ಗುಲ್ಬರ್ಗ	1295	996	2291
12.	ಹಾಸನ	2369	1491	3860
13.	ಕೊಡಗು	291	262	553
14.	ಕೋಲಾರ	2889	853	3742
15.	ಮಂಡ್ಯ	1365	508	1873
16.	ಮೈಸೂರು	1649	1030	2679
17.	ರಾಯಚೂರು	1396	649	2045
18.	ಶಿವಮೊಗ್ಗ	1785	3032	4817
19.	ತುಮಕೂರು	2537	2947	5484
20.	ಉತ್ತರ ಕನ್ನಡ	1264	4612	5876
	ಒಟ್ಟು	27066	29616	56682

ಮೈಸೂರಿನ ಪಿ.ಕೆ.ಟಿ.ಬಿ. ಆಸ್ಪತ್ರೆಗೆ ಸರಬರಾಜಾಗಿರುವ ಅತ್ಯಾಧುನಿಕ ಉಪಕರಣಗಳು.

816(955) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರಿನ ಪಿ.ಕೆ.ಟಿ.ಟಿ. ಆಸ್ಪತ್ರೆಗೆ ಸರಬರಾಜಾಗಿರುವ ಅತ್ಯಾಧುನಿಕ ಉಪಕರಣಗಳಾವುವು?

2) ಸದರಿ ಉಪಕರಣಗಳು ಕಾರ್ಯ ನಿರ್ವಹಿಸುತ್ತಿವೆಯೇ?

3) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಡಾ: ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

1) ಮೈಸೂರು ಪಿ.ಕೆ.ಟಿ.ಟಿ. ಆಸ್ಪತ್ರೆಗೆ ಸ್ಪೆರೋಮೀಟರ್-1 ಫ್ಲೆರೋಮೀಟರ್-1, ಡಯಾಥರಮಿ-1, ಬ್ಲಡ್ ಅನಲೈಸರ್-1, (ಬ್ಲಡ್ ಗ್ಯಾಸ್ ಅನಲೈಸರ್) ಮೈಕ್ರೋಪ್ರೊಫೆಸರ್ ಬೇಬಿ ಇನ್‌ಕ್ಯುಲೇಟರ್-1, ಫಲ್ಸ್ ಆಕ್ಸಿಮೀಟರ್-1, ವೆಂಟಿಲೇಟರ್‌ಗಳು-2 ಬಾಯಲ್ಸ್ ಅನಸ್ತೇಷಿಯಾ ಯಂತ್ರ-1 ಗಳನ್ನು ಪೂರೈಸಲಾಗಿದೆ. ಆರಿಜಂಟಲ್ ರೆಫ್ರಾಂಗ್ಯುಲರ್ ಸ್ಟರಿಲೈಸರ್ ಒದಗಿಸಲು ಹಾಗೂ ಇಂಪೋರ್ಟೆಡ್ 'ಒ.ಟಿ' ಟೇಬಲ್ಸ್ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ.

2) ಬ್ಲಡ್ ಗ್ಯಾಸ್ ಅನಲೈಸರ್ ಉಪಕರಣವನ್ನುಳಿದು ಎಲ್ಲಾ ಉಪಕರಣಗಳು ಕಾರ್ಯ ನಿರ್ವಹಿಸುತ್ತಿವೆ.